ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

೧೦ನೇ ವರ್ಷ   ೧೨ನೇ ಸಂಚಿಕೆ   ಬೆಲೆ ೭೦ ಪೈಸೆ

ಕೊಪ್ಪ   ೭-೪-೧೯೯೧   ಭಾನುವಾರ   ದೂರವಾಣಿ : ೧೧೪

ನಕಲಿ ನೋಟಿನ ಜಾಲ ಬಯಲು: ೭ ಬಂಧನ: ಜಿಲ್ಲಾ ಪೋಲೀಸರ ಸಾಹಸ

ಚಿಕ್ಕಮಗಳೂರು : ಜಿಲ್ಲೆಯ ವಿವಿಧೆಡೆ, ಮುಖ್ಯವಾಗಿ ಶೃಂಗೇರಿ, ಕೊಪ್ಪ, ನ. ರಾ. ಪುರ, ತರೀಕೆರೆ ತಾ||ಗಳಲ್ಲಿ ೧೦ ರೂ ಗಳ ಖೋಟಾ ನೋಟುಗಳನ್ನು ಚಲಾಯಿಸು ತ್ತಿದ್ದ ಅಂತರ ರಾಜ್ಯ ತಂಡವೊಂದನ್ನು ಜಿಲ್ಲೆಯ ಪೋಲೀಸರು ಪತ್ತೆ ಹಚ್ಚಿ ೭ ಮಂದಿಯನ್ನು ಬಂಧಿಸಿದ್ದಾರೆ.

ಮಾ. ೧೦ ರಂದು ನ. ರಾ. ಪುರದಲ್ಲಿ ಬಂಧಿಸಲ್ಪಟ್ಟ ನಾಗರಾಜ ಮತ್ತು ಸುಂದರ ಪೂಜಾರಿಯಿಂದ ದೊರೆತ ಸುಳಿವಿನ ಮೇಲೆ ಮಂಗಳೂರು-ಬೆಂಗಳೂರು ರಸ್ತೆಯ ಒಳ ಚಿಲ್ ಎಂಬ ಹಳ್ಳಿಯಲ್ಲಿ ದಾಳಿ ನಡೆಸಿ, ಐವರನ್ನು ಬಂಧಿಸಿ, ೧೦ ರೂ. ಗಳ ೫೩೦ ನೋಟುಗಳನ್ನು ವಶಪಡಿಸಿಕೊಳ್ಳಲಾಯಿತು.

ಇನ್ನೂ ಪತ್ತೆಯಾಗದಿರುವ ಶಿವಕಾಶಿಯ ಕಂದಸ್ವಾಮಿ ಎಂಬ ಮಧ್ಯವರ್ತಿಯ ಮೂಲಕ ಕೇರಳದಿಂದ ಬರುತ್ತಿರುವ ಈ ನಕಲಿ ನೋಟುಗಳು ಅಸಲಿಯಂತೆಯೇ 'ವಾಟರ್' ಮಾರ್ಕ್, ಭದ್ರತಾ ದಾರ ಎಲ್ಲ ಹೊಂದಿವೆ. ಆದರೆ, ಮುದ್ರಣಕ್ಕೆ ಬಳಸಿದ ಕಾಗದ ಮಾತ್ರ ಸ್ವಲ್ಪ ತೆಳು. ಈ ನೋಟುಗಳು ಹಳತೆಂದು ಕಾಣಲು ಅವನ್ನು ಕಾಫಿಯಲ್ಲಿ ಅದ್ದಿ, ಒಣಗಿಸಿ, ಇಸ್ತ್ರಿ ಮಾಡಿ ಚಲಾಯಿಸುತ್ತಿದ್ದರು.

ಬೀಡಾ ಅಂಗಡಿ, ಸಾರಾಯಿ ಅಂಗಡಿ, ಎಳನೀರು ಅಂಗಡಿ, ರಾತ್ರಿಯ ಬಾರ್‌ಗಳ ಮೂಲಕ ಹಾಗೂ ಕಾರ್ಮಿಕರಿಗೆ ಸಂಬಳ ಕೊಡುವಾಗ ಈ ನೋಟುಗಳ ಚಲಾವಣೆಯಾಗುತ್ತಿತ್ತು. ಕನಿಷ್ಠ ೩೫ ಲಕ್ಷ ಇಂಥ ನೋಟುಗಳನ್ನು ಮುದ್ರಿಸಿರುವ ಅಂದಾಜಿದ್ದು, ಈ ಜಾಲದ ಮುಖ್ಯ ಆರೋಪಿಯನ್ನು ಕೇರಳ ಪೋಲೀಸರು ಬೆನ್ನು ಹತ್ತಿದ್ದಾರೆಂದು ಎಸ್ಪಿ ಚಿಕ್ಕೆರೂರ್ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಶೃಂಗೇರಿ ಲಯನ್ಸ್ ಕ್ಲಬ್ ಆಶ್ರಯದ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ

೮೦ ಮಂದಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ಇಲ್ಲಿನ ಲಯನ್ಸ್‌ಕ್ಲಬ್ ವತಿಯಿಂದ ಬೃಹತ್ ಪ್ರಮಾಣದಲ್ಲಿ ನಡೆದ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ಏ ೩ರಂದು ೮೦ ಮಂದಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ನಡೆಸಲಾಯಿತು.

ಶೃಂಗೇರಿ, ಕೊಪ್ಪ, ನ. ರಾ. ಪುರ ಈ ಮೂರೂ ತಾ||ಗಳ ವಿವಿಧ ಆಸ್ಪತ್ರೆಗಳಲ್ಲಿ ಸುಮಾರು ೧೦೦೦ ಮಂದಿಯನ್ನು ಪೂರ್ವಭಾವಿ ಕಣ್ಣಿನ ಪರೀಕ್ಷೆಗೊಳಪಡಿಸಿ, ಅವರಲ್ಲಿ ೮೦ ಮಂದಿಯನ್ನು ಶಸ್ತ್ರ ಚಿಕಿತ್ಸೆಗೆ ಆಯ್ಕೆ ಮಾಡಲಾಗಿತ್ತು.

ಮೈಸೂರಿನ ಡಾ|| ಮಂಜೇಗೌಡರ ನೇತೃತ್ವದಲ್ಲಿ, ಚಿಕ್ಕಮಗಳೂರಿನ ಡಾ||ನಾರಾಯಣ ಮೂರ್ತಿ, ಮೂಡಿಗೆರೆಯ ಡಾ|| ಚಂದ್ರಹಾಸ ಗುಪ್ತ, ಕೊಪ್ಪದ ಡಾ|| ನಾಗಭೂಷಣ ಹಾಗೂ ಇವರುಗಳ ನುರಿತ ಸಿಬ್ಬಂದಿಗಳು ಈ ಪರೀಕ್ಷೆ ಪತ್ತು ಶಸ್ತ್ರ ಚಿಕಿತ್ಸೆಗಳನ್ನು ನೆರವೇರಿಸಿದರು. ಶೃಂಗೇರಿ ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿಯನ್ನು ಪೂರ್ಣವಾಗಿ ಕೆಲಸಕ್ಕೆ ಕರೆದುಕೊಳ್ಳಲಾಗಿತ್ತು.

೮೦ ಮಂದಿ ಶಸ್ತ್ರಚಿಕಿತ್ಸೆಗೊಳಗಾದವರು ಹಾಗೂ ಅವರ ಒಬ್ಬೊಬ್ಬ ಸಹಾಯಕರಿಗೆ ಊಟ, ವಸತಿ ಏರ್ಪಾಡನ್ನೂ, ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡವರೆಲ್ಲರಿಗೆ ಕನ್ನಡಕವನ್ನೂ ಉಚಿತವಾಗಿ ಒದಗಿಸಲಾಗಿದೆ.

ಲಯನ್ಸ್ ಕ್ಲಬ್‌ನ ಜಿಲ್ಲಾ ರಾಜ್ಯಪಾಲ ಸುಂದರೇಶ್ವರ ಅವರ ಅಧ್ಯಕ್ಷತೆಯಲ್ಲಿ ಶೃಂಗೇರಿ ಜಗದ್ಗುರುಗಳು ಶಿಬಿರವನ್ನು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ, ಪ್ರವಾಸಿ ಮಂದಿರದ ಉದ್ಯೋಗಿಯಾಗಿದ್ದು ತೀವ್ರ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಯೊಬ್ಬರಿಗೆ ೫೦೦ ರೂ. ಗಳ ನೆರವನ್ನೂ, ಕಾಂಟ್ರ್ಯಾಕ್ಟ್ ಲೆನ್ಸ್ ಅಗತ್ಯವಿದ್ದವರಿಗೆ ೫೦೦ ರೂ ಗಳನ್ನೂ ನೀಡಲಾಯಿತು.

ಆಕಾಶವಾಣಿ ಕಾರ್ಯಕ್ರಮ

ದಿನಾಂಕ. ೧೧-೪-೯೧ ನೇ ಗುರುವಾರ ರಾತ್ರಿ ೮-೧೦ ಕ್ಕೆ ಆಕಾಶವಾಣಿಯ ಭದ್ರಾವತಿ ನಿಲಯದಿಂದ 'ಯುವ ವಾಣಿ' ಯಲ್ಲಿ ಹಾಲ್ಮುತ್ತೂರಿನ ಆಜಾದ್ ಯುವಕ ಸಂಘದ ಸದಸ್ಯರಿಂದ"ಕಾರ್ಯಕ್ರಮ ವೈವಿಧ್ಯ" ಪ್ರಸಾರವಾಗಲಿದೆ.

'ಮುಂಜಾವು' ಸಂಪಾದಕರ ಮೇಲೆ ಪ್ರಧಾನರೊಬ್ಬರ ಹಲ್ಲೆಗೆ ಸರ್ವತ್ರ ಖಂಡನೆ

ಕೊಪ್ಪ : ಇಲ್ಲಿ ಏ. ೨ ರಂದು 'ಮುಂಜಾವು' ಸಂಪಾದಕರಾದ ಸಿರಿಮನೆ ನಾಗರಾಜ್‌ರವರ ಮೇಲೆ ಹರಂದೂರು ಮಂಡಲ ಪ್ರಧಾನ ಗುಣವಂತೆ ಪರಮೇಶ್ವರ ತೀವ್ರವಾಗಿ ಹಲ್ಲೆ ನಡೆಸಿ, ಕೊಲ್ಲುವ ಬೆದರಿಕೆ ಹಾಕಿದ ಹೇಯ ಪ್ರಕರಣ ನಡೆದಿದೆ.

ಈ ಬಗ್ಗೆ ಕೊಪ್ಪ ಪೋಲೀಸು ಠಾಣೆಯಲ್ಲಿ ಕೇಸು ದಾಖಲಾಗಿದ್ದು, ಆರೋಪಿ ಪರಮೇಶ್ವರ ಮತ್ತು ಹಲ್ಲೆಯ ವೇಳೆ ಆತನ ಜೊತೆಗಾರರಾಗಿದ್ದ ಹರಂದೂರು ಮಂಡಲ ಸದಸ್ಯ ತಿಮ್ಮೇಗೌಡ ಹಾಗೂ ಕೂಸುಗೊಳ್ಳಿಯ ಕೆ. ಜಿ. ಕೃಷ್ಣಮೂರ್ತಿ ಇವರುಗಳನ್ನು ಏ ೩ ರಂದು ಬಂಧಿಸಿ ಕೋರ್ಟಿಗೆ ಹಾಜರುಪಡಿಸಲಾಗಿ, ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ.

'ಜಿಲ್ಲಾ ಪತ್ರಕರ್ತರ ಸಂಘ ಏ. ೩ರಂದು ಚಿಕ್ಕಮಗಳೂರಿನಲ್ಲಿ ತುರ್ತು ಸಭೆ ನಡೆಸಿ, ಈ ಹಲ್ಲೆಯನ್ನು ಉಗ್ರವಾಗಿ ಖಂಡಿಸಿತಲ್ಲದೆ, ಈಗಾಗಲೇ 'ರೌಡಿ ಶೀಟ್' ಹೊಂದಿದ್ದೂ ಸಹ ದಿನವಹಿ ಇಂಥ ನೂರಾರು ದುಷ್ಕೃತ್ಯಗಳನ್ನು ಎಸಗುತ್ತಿರುವ ಪರಮೇಶ್ವರನನ್ನು ಕೂಡಲೇ ಗಡೀಪಾರು ಮಾಡಬೇಕೆಂದು ಜಿಲ್ಲಾಧಿಕಾರಿಗಳನ್ನೂ, ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳನ್ನೂ ಒತ್ತಾಯಿಸಿದೆ.

"ಪತ್ರಿಕೆಯಲ್ಲಿ ಬೆಳಕು ಕಾಣದಿರುತ್ತಿದ್ದರೆ, ಕತ್ತಲೆಯಲ್ಲಿ ಕರಗಿಯೇ ಹೋಗುತ್ತಿದ್ದ ತಮ್ಮ ಎಷ್ಟೋ ಕರಾಳ ಕೃತ್ಯಗಳನ್ನು ಸಾರ್ವಜನಿಕರೆದುರು ಸಮರ್ಥಿಸಿಕೊಳ್ಳಲಾಗದ ಕತ್ತಲೆಯ ಜೀವಿಗಳು, ಅಂಥ ಬೆಳಕನ್ನೇ ಇಲ್ಲವಾಗಿಸಲು ಹೊರಟಂತಿದೆ ಈ ಕೃತ್ಯ" ಎಂದು ವರ್ಣಿಸಿರುವ ಶೃಂಗೇರಿಯ ದ.ಸಂ ಸ. ಸಂಚಾಲಕ ಗೋಪಾಲ್ ಮತ್ತು ಪತ್ರಕರ್ತ ಕಲ್ಕುಳಿ ವಿಠಲ ಹೆಗ್ಡೆ ಇವರುಗಳು, "ಪತ್ರಿಕೆಯ ಅಭಿಪ್ರಾಯಗಳು ಒಬ್ಬ ವ್ಯಕ್ತಿಯದಾಗಿರದೆ, ಸಾವಿರಾರು ಜನರ ಒಟ್ಟಭಿಪ್ರಾಯದ ಅಭಿವ್ಯಕ್ತಿಯಾಗಿರುತ್ತವೆ. ಇಂಥ ಸಾರ್ವಜನಿಕ ಅಭಿಪ್ರಾಯವನ್ನೂ, ಜನರ ಆಶೋತ್ತರಗಳನ್ನೂ ಹತ್ತಿಕ್ಕಲು ನಡೆಯುವ ಎಷ್ಟೇ ಕ್ರೂರವಾದ ದಬ್ಬಾಳಿಕೆಯಾದರೂ ಸಹ ಅದು ಜನರ ಪ್ರತಿಭಟನೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ ಹೊರತು ಎಂದಿಗೂ ಕುಂದಿಸುವುದಿಲ್ಲ" ಎಂದಿದ್ದಾರೆ

ಹಲ್ಲೆಯ ವೇಳೆ ಕೊಪ್ಪದ ಆಸ್ಪತ್ರೆಯಲ್ಲಿರುವ ಬಂಧುವೊಬ್ಬರನ್ನು ನೋಡಿಕೊಳ್ಳಲು ಬಂದಿದ್ದ ಶೃಂಗೇರಿ ತಾಲ್ಲೂಕಿನ ಮೂಡಬೆಟ್ಟು ಯುವಕನೊಬ್ಬನಿಂದ ಅಂದು ಸಂಜೆಯೇ ವಿಷಯ ತಿಳಿದ ಚಾಪಲ್ಮನೆ ಮಂಜಲು ಸದಸ್ಯ ಮತ್ತು ಕೊಪ್ಪ ತಾ|| ದ. ಸಂ. ಸ. ಕಾರ್ಯ ಕರ್ತ ಬಾಬಯ್ಯ ಅವರು, ಮರುದಿನ ಬೆಳಗ್ಗೆಯೇ ಧಾವಿಸಿ ಬಂದು, ಹಲ್ಲೆಯ ಬಗ್ಗೆ ತಮ್ಮ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಘಟನೆ ತಿಳಿದು ಮಾಜಿ ಮಂತ್ರಿ ಎಚ್. ಜಿ. ಗೋವಿಂದಗೌಡ, ಬಂಕ್ರವಳ್ಳಿ ಪ್ರಧಾನರಾದ ವಸಂತ ಅಡಿಗ, ಉಪಪ್ರಧಾನರಾದ ಕೆಸವೆ ಶಾಂತಾರಾಂ ಮುಂತಾದ ಹಲವಾರು ಜನ ಮುಖಂಡರು ತಮ್ಮ ತೀವ್ರ ಅಸಂತೋಷ, ವಿಗ್ರಹಿಮೆಗಳನ್ನು ವ್ಯಕ್ತಪಡಿಸಿದ್ದಾರೆ.

'ಶೃಂಕೋಪ' ಪತ್ರಿಕಾ ಬಳಗದ ಎಸ್ ಸಿ. ಪಾಂಡುರಂಗ ಅವರು ಹಲ್ಲೆಯನ್ನು ತೀಕ್ಷ್ಣವಾಗಿ ಖಂಡಿಸುತ್ತ, ಇಂಥ ಹಲ್ಲೆಗಳಿಂದೆಲ್ಲ ಪತ್ರಿಕೆಗಳ ಧ್ವನಿಯನ್ನು ಅಡಗಿಸುವುದು ಸಾಧ್ಯವಿಲ್ಲ ಎಂದು ಎಚ್ಚರಿಸಿದ್ದಾರೆ.

ಕಿಗ್ಗಾಹಳ್ಳಿಯ ಪತ್ರಿಕೆಯೊಂದು ಹಲ್ಲೆಯನ್ನು ಖಂಡಿಸಿ ಕೊಡುತ್ತ, 'ಮುಂಜಾವು' ಸಂಪಾದಕರು ಸಿಕ್ಕಿದ್ದಲ್ಲೆಲ್ಲ ಮಾನಗೆಡಿಸುವುದು ಹಾಗೂ ಬರೆಯುವುದರಿಂದ ಈ ಹಲ್ಲೆ ನಡೆದಿದೆ ಎಂದು ಹಲ್ಲೆಯನ್ನು ಸಮರ್ಥಿಸಿಕೊಂಡಿದೆ.

(ಘಟನೆಯ ವಿವರ ಒಳ ಪುಟದಲ್ಲಿ)

ಚಿಕ್ಕಮಗಳೂರಿಗೆ ವಾಜಪೇಯಿ

ಚಿಕ್ಕಮಗಳೂರು : ಭಾರತೀಯ ಜನತಾ ಪಾರ್ಟಿಯ ನಾಯಕ ಅಟಲ್ ಬಿಹಾರಿ ವಾಜಪೇಯಿಯವರು ಏ. ೧೫ ರಂದು ಇಲ್ಲಿಗೆ ಆಗಮಿಸಿ, ಬೆಳಗ್ಗೆ ೧೧ ಗಂಟೆಗೆ ಜಿಲ್ಲಾ ಆಟದ ಮೈದಾನದಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡುವರು. ಈ ಸಂದರ್ಭದಲ್ಲಿ ಅವರಿಗೆ ೧೨ ಲಕ್ಷ ರೂ.ಗಳ ನಿಧಿಯನ್ನು ಸಮರ್ಪಿಸಲಾಗುವುದೆಂದು ಬಿಜೆಪಿ ಜಿಲ್ಲಾಧ್ಯಕ್ಷ ಬಿ. ಎಸ್. ವಿಠಲರಾವ್ ತಿಳಿಸಿದ್ದಾರೆ.

ಆಯುರ್ವೇದ ಕಾಲೇಜು ಸ್ಥಳಾಂತರ ಯತ್ನಕ್ಕೆ ಬಿಜೆಪಿ ತೀವ್ರ ವಿರೋಧ

ಪ್ರಿಯರೆ,

ಕೊಪ್ಪದಲ್ಲಿರುವ ಆಯುರ್ವೇದ ಕಾಲೇಜನ್ನು ಸ್ಥಳಾಂತರಿಸಲು ಪ್ರಯತ್ನಗಳು ನಡೆದಿವೆಯೆಂದು ತಿಳಿದು ಬಂದಿದೆ. ವಿದ್ಯಾರ್ಥಿಗಳ ಹಾಗೂ ಕೊಪ್ಪ ತಾಲ್ಲೂಕಿನ ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕಾಲೇಜನ್ನು ಬೇರೆಡೆಗೆ ಸ್ಥಳಾಂತರಿಸುವುದನ್ನು ಕೊಪ್ಪ ತಾಲ್ಲೂಕು ಹಾಗೂ ಚಿಕ್ಕಮಗಳೂರು ಜಿಲ್ಲಾ ಬಿ.ಜೆ.ಪಿ. ಯು ವಿರೋಧಿಸುತ್ತದೆ.

ಈ ಕಾಲೇಜಿಗೆ ಅವಶ್ಯವಿರುವ ಸವಲತ್ತುಗಳನ್ನು ಒದಗಿಸುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿದ್ದು, ಇದರ ಉಸ್ತುವಾರಿಯು ವಿಶ್ವವಿದ್ಯಾನಿಲಯದ ಹೊಣೆಯಾಗಿರುತ್ತದೆ. ಆಡಳಿತ ಮಂಡಳಿಯವರು ಉತ್ತಮ ಸೌಲಭ್ಯ ನೀಡದೆ ಈ ತನಕ ಸುಮ್ಮನಿದ್ದು, ಇದೀಗ ಕಾಲೇಜನ್ನು ಬೇರೆಡೆಗೆ ಸ್ಥಳಾಂತರಿಸಬೇಕೆನ್ನುವ ಬೇಡಿಕೆ ಅಸಮಂಜಸವಾಗಿದೆ. ಕಾಲೇಜಿನಲ್ಲಿ ಈಗಿರುವ ವ್ಯವಸ್ಥೆಗಳ ಬಗ್ಗೆ ಸರಿಯಾಗಿ ಪರಿಶೀಲಿಸದೇ **ವಿಶ್ವವಿದ್ಯಾನಿಲಯದವರೂ ಸಹ ನಿಕಪಕ್ಷೀಯವಾಗಿ ತೀರ್ಮಾನ ಕೈಗೊಂಡು ಈ ಕಾಲೇಜಿನ ಮಾನ್ಯತೆ ರದ್ದು ಮಾಡಲು ನಿರ್ಧರಿಸಿ ಸರ್ಕಾರಕ್ಕೆ ಶಿಫಾರಸ್ ಮಾಡಿರುವುದನ್ನು ಗಮನಿಸಿ**ದರೆ, ಇದರಲ್ಲಿ ದುರುದ್ದೇಶವಿದೆಯೆಂದು ತೋರಿಬರುತ್ತಿದೆ.

—ಶಿಗದಾಳು ರಾಮಮೋಹನ್.
ಕಾರ್ಯದರ್ಶಿ, ಬಿ.ಜೆ.ಪಿ , ಕೊಪ್ಪ ತಾ||

“ಆ ಮೆ”

ಇನ್ನು ಯಾವ ಹೆಸರೂ ಸೂಕ್ತವೆನಿಸು ವುದಿಲ್ಲ. ನಮ್ಮ– ನಿಮ್ಮ (ಹಲವರ) ಅಲ್ಪ ತಿಳುವಳಿಕೆಯಂತೆ, ಅದೊಂದು 'ಪಾಪದ', ಮಂದಗತಿಯ, ಯಾವುದೇ ಆಕರ್ಷಣೆ ಇಲ್ಲದ ಪ್ರಾಣಿ. ಹಾಗೆಯೇ ಈ ಮಹಿಳಾ ಸಂಘಟನೆಯ ಯತ್ನವೂ ಸಹಾ. ಚಿಂತೆ ಯಿಲ್ಲ. ನಿರಾಸೆಯೂ ಇಲ್ಲ. ಈಗ ಅಂದಾಜು ೬-೮ ತಿಂಗಳ ಹಿಂದೆ ಕೊಪ್ಪದ ಕೆಲ ಆಸಕ್ತ ಮಹಿಳೆಯರ ಆಶಯದಂತೆ, ನನ್ನ ಹೆಸರ ಲ್ಲೊಂದು ಕರಪತ್ರ ಹೊರಟಿತ್ತು–೪ ಪ್ರಶ್ನೆ ಗಳಿಗೆ ಮುಕ್ತ ಉತ್ತರ ನಿರೀಕ್ಷಿಸಿ. ಅದರ ಸಮೀಕ್ಷೆಯನ್ನು ಅಂದೇ ಬರೆಯುವ ಎಂದಿ ದ್ದೆ. ಆದರೆ ನಾನೂ ಆಮೆ ಗುಂಪಿಗೇ ಸೇರಿ ದವಳಲ್ಲವೆ!

ನಮ್ಮ ಕರಪತ್ರದ ಪ್ರಶ್ನೆಗಳು :

೧. ಮಹಿಳೆಯರ ಸಮಸ್ಯೆಗಳಿಗೆ ಮಹಿಳಾ ವಾದಿಯ ದೃಷ್ಟಿಯಿಂದ ಸ್ಪಂದಿಸುವ ಸಂಘಟನೆಯ ಅಗತ್ಯ ಇದೆಯೆ?

೨. ಇದೆ ಅನಿಸಿದರೆ, ಅಂಥದೊಂದು ಸಂಘಟನೆ ಕಾರ್ಯ ಸಾಧ್ಯವೇ ?

೩. ಸಾಧ್ಯವಿದ್ದರೆ ನಿಮ್ಮ ವೈಯಕ್ತಿಕ ಸಹಕಾರ ನೀಡುವಿರಾ ?

೪. ನೀಡುವುದಾದರೆ, ಯಾವ ರೂಪ ದಲ್ಲಿ ?

ಈ ಬಹು ಸರಳ ಪ್ರಶ್ನೆಗಳಿಗೆ ವಿವಿಧ ಪ್ರತಿಕ್ರಿಯೆಗಳು ಬಂದವು. ಕೆಲವು ಕ್ಷುಲ್ಲಕ ಮತಿಗಳ ಸಂಕುಚಿತ ಯೋಚನಾ ಲಹರಿ "ಇದು ಪ್ರಚಾರ ಇರಬಹುದೆ?" ಎಂದು ಯೋಚಿಸಿದರೆ, ಕೆಲವು ಸಂಪ್ರದಾಯವಾದಿ ಗಳ ಬುದ್ಧಿ, "ಈ ಹೆಂಗಸರಿಗೆ ಬೇರೆ ಕೆಲಸ ವಿಲ್ಲ" ಎಂದು ಹೇಳಿರಲೂಬಹುದು. ಆದರೆ ನನ್ನ ಗಮನಕ್ಕೆ ಬಂದ ಹಾಗೂ ಕೈಗೆ ಸಿಕ್ಕ ಪ್ರತಿಕ್ರಿಯೆಗಳನ್ನು ಯಥಾವತ್ತಾಗಿ ನಿಸ್ಸಂ ಕೋಚವಾಗಿ ಸಮೀಕ್ಷಿಸುತ್ತೇನೆ.

ಅಂಚೆಯ ಮೂಲಕ ಮತ್ತು ವೈಯ ಕ್ತಿಕವಾಗಿ ಒಟ್ಟು ಸುಮಾರು ೩೫೦ ಕರ ಪತ್ರಗಳನ್ನು ಮೂರೂ ತಾ||ಗಳಲ್ಲಿ ಹಂಚ ಲಾಗಿತ್ತು. ಈ ಎಲ್ಲ ಕರಪತ್ರಗಳನ್ನೂ ಬಹುತೇಕ ಆಯ್ದ ವ್ಯಕ್ತಿಗಳಿಗೆ ಕಳುಹಿಸ ಲಾಗಿತ್ತು. ಈ ಆಯ್ದ ವ್ಯಕ್ತಿಗಳು ಸಹ ಕೆಳಕಂಡ ಅಂಶಗಳಿಂದ ಗುರ್ತಿಸಲ್ಪಟ್ಟವರು:

೧) ವಿಚಾರವಂತ ಮಹಿಳೆಯರು, ೨.) ವಿದ್ಯಾವಂತ ಮಹಿಳೆಯರು, ೩.) ಮಹಿಳಾ ಉಪನ್ಯಾಸಕರು ಮತ್ತು ವಿದ್ಯಾ ರ್ಥಿನಿಯರು, ೪) ಪ್ರಗತಿಪರರು ಮತ್ತು ಸಮಾಜಿಕ ಕಳಕಳಿಯುಳ್ಳವರು, ೫) ಮಹಿಳೆಯರ ಬಗ್ಗೆ ಕಳಕಳಿಯುಳ್ಳವರು, ೬) ಮಹಿಳಾ ಸಮಾಜ ಮತ್ತು ಯುವತಿ ಮಂಡಲಿಯವರು, ಹಾಗೂ ೭.) ನಾವು– ನೀವೆಲ್ಲಾ ಮತ ಕೊಟ್ಟು ಚುನಾಯಿಸಿದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾ ಯ್ತಿಯ ಮಹಿಳಾ ಸದಸ್ಯೆಯರು.

ಈ ಏಳನೇ ಗುಂಪಿನವರನ್ನು ಸ್ವಲ್ಪ ಒತ್ತು ಕೊಟ್ಟು ಗುರ್ತಿಸಲು ಕಾರಣವೆಂದರೆ, ಮಹಿಳೆಯರ ಪಾಲಿನ ಮೀಸಲಾತಿಯಿಂದ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳು ಪ್ರಜಾಪ್ರಭುತ್ವದಲ್ಲಿ ಮಹಿಳಾ ಸಮಸ್ಯೆ ಗಳಿಗೆ ಪರಿಣಾಮಕಾರಿಯಾಗಿ ಪ್ರತಿಸ್ಪಂದಿಸ ಬಲ್ಲರು ಎನ್ನುವ ಭ್ರಮೆಯಿಂದ.

ಹೀಗೆ, ಮೇಲೆ ಹೇಳಿದ ಖಾಸಗಿ ವ್ಯಕ್ತಿ ಗಳು, ತಮ್ಮ ಸ್ವಂತ ಶ್ರಮ ಮತ್ತು ಖರ್ಚಿ ನಿಂದ ಕರಪತ್ರ ಹೊರಡಿಸಿದ್ದು ಅದಕ್ಕೆ ಒಟ್ಟಾರೆ ಬಂದ ಲಿಖಿತ ಪ್ರತಿಕ್ರಿಯೆಗಳು ಹತ್ತು. ಇದು, "ಕೇವಲ ಹತ್ತು" ಆಗಿರ ಬಹುದು ಅಥವಾ "ಅಬ್ಬಬ್ಬ, ಹತ್ತು!" ಆಗಲೂಬಹುದು. ಅಂತೂ ಈ ಹತ್ತು ಕುಹಕ ಬುದ್ಧಿಯಿಂದ ನೋಡದೇ ಬಂದಂಥವು.

ಮುಕ್ತವಾಗಿ ಯೋಚಿಸುವುದಾದರೆ, ಇವು ಮರುಭೂಮಿಯಲ್ಲಿ ಸಿಕ್ಕ ಓಯಸಿಸ್ ಗಳು. ಇವರು: ಶ್ರೀಮತಿ ಶಾರದ, ಶೃಂಗೇರಿ, ಎಸ್. ವಾಣಿಶ್ರೀ, ಹರಿಹರಪುರ, ಶ್ರೀ ಚಿಕ್ಕೇಗೌಡ, ಕಾರ್ಯದರ್ಶಿ, ಎ. ಐ. ಟಿ. ಯು. ಸಿ., ಕೊಪ್ಪ, ಕು|| ಹೇಮಾ, ಮಂ ಡಲ ಸದಸ್ಯೆ, ನ ರಾ. ಪುರ, ಕೆ. ಎನ್. ಅನಿಲ್ ಕುಮಾರ್, ಹರಿಹರಪುರ, ಬಿ. ಎ. ನಾಗರತ್ನ, ಉಪನ್ಯಾಸಕಿ, ಕೊಪ್ಪ, ಶ್ರೀ ವತ್ಸ, ಹು. ವಾ. ಪ್ರಕಾಶಕ, ಹೇರೂರು, ಶಾರದಮ್ಮ, ಮಂಡಲ ಸದಸ್ಯೆ, ಮೇದಾರ ಬೀದಿ, ನ.ರಾ. ಪುರ ಮತ್ತು ಎಂ ಐ. ಶ್ರೀ ನಿವಾಸ ಮೂರ್ತಿ, ಸಂಪಾದಕರು, 'ಮಲೆ ನಾಡು ಮಲ್ಲಿಗೆ', ನ.ರಾ. ಪುರ.

ಇನ್ನು ಖುದ್ದು ಕಂಡು ಪ್ರತಿಕ್ರಿಯಿಸಿದ ವರು : ಶ್ರೀಮತಿ ವನಮಾಲ, ಜಿಲ್ಲಾ ಕಾಂ. ಗ್ರೆ ಅಧ್ಯಕ್ಷೆ. ನ ರಾ. ಪುರ, ಶ್ರೀಮತಿ ವರ ಲಕ್ಷ್ಮಮ್ಮ, ಮಹಿಳಾ ಸಮಾಜ, ನ.ರಾ. ಪುರ, ಶಾರದಮ್ಮ, ಮಂಡಲ ಸದಸ್ಯೆ, ನ. ರಾ. ಪುರ, ಜಲಜಾಕ್ಷಮ್ಮ, ಮಹಿಳಾ ಸಮಾಜದ ಅಧ್ಯಕ್ಷೆ, ಕೆಟ್ಟಿ ಕೊಪ್ಪ ಹಾಗೂ ಸೀತೂರಿನ ಯುವತಿ ಮಂಡಳಿಯ ಚ.ರು ಕಿನ ಯುವತಿಯರು.

ಇವರೆಲ್ಲರ ಅಭಿಪ್ರಾಯಗಳನ್ನು ವಿಂಗಡಿ ಸುವುದಾದರೆ:

೧. ಕೆಲವರು "ಈ ಲಾಯರ್ ಕಳುಹಿ ಸಿದ ಈ ಕರಪತ್ರ ಒಂದು ತರಹ 'ನೋಟೀಸ್' ಇರಬಹುದೇ?" ಎಂದು ವಿಚಾರಿಸಿ, "ನಾವು ಏನು ಮಾಡಬೇಕು ?" ಎಂದು ಮುಗ್ಧತೆಯಿಂದ, ಯಾವುದೋ ಕರ್ತವ್ಯ ವನ್ನು ನಿರೀಕ್ಷಿಸಿದ್ದಂಥವರು;

೨. ಕೆಲವರಿಗೆ, ತಾವು ಉತ್ತರಿಸದೆ ಹೋ ದರೆ ಎಲ್ಲಿ ತಮ್ಮನ್ನು ಅಪಾರ್ಥ ಮಾಡಿ ಕೊಳ್ಳಲಾಗುವುದೋ ಎಂಬ ಅಳುಕಿನಿಂದ, ಪ್ರಶ್ನೆಗಳನ್ನು ಹೊರತುಪಡಿಸಿ ಆದರ್ಶ, ಉದ್ವೇಗದ ಪ್ರತಿಕ್ರಿಯೆ ನೀಡಿದವರು;

೩) ಹಲವರು ನಿಜಕ್ಕೂ ಕಾಳಜಿಯಿಂದ ತಮ್ಮ ಮಿತಿಯನ್ನು ಸ್ಪಷ್ಟವಾಗಿ ಅರಿತು ಕೊಂಡು ಅಳಿಲು ಸೇವೆಗೆ ಸಿದ್ಧವಿರುವವರು;

೪) ಬಹಳಷ್ಟು ಜನ, ಒಳಗೆ ಅನ್ನಿಸಿದ ರೂ, ಏನು ಬರೆಯುವುದು, ಹೇಗೆ ಬರೆಯು ವುದು ಎಂಬ ಡೋಲಾಯಮಾನದಲ್ಲಿ, ಕರ ಪತ್ರವನ್ನೇ ಮರೆತವರು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಮು ದ್ರಿಸಿದ ಕರಪತ್ರಗಳ ಸಂಖ್ಯೆಗೆ ಪ್ರತಿಕ್ರಿಯೆ ಯ ಸಂಖ್ಯೆ, ಸಂಖ್ಯಾ ದೃಷ್ಟಿಯಿಂದ ತುಲ ನೆಗೆ ಅಸಾಧ್ಯವಾದುದಾದರೂ, ಗಟ್ಟಿ ಕಾ ಳುಗಳ ಪರಿಚಯ, ಅವರ ಇತಿಮಿತಿಗಳು,

(೩ನೇ ಪುಟಕ್ಕೆ)

ಅನಾಚಾರಕ್ಕೆ ಅಡ್ಡ ಬರುವವರನ್ನು, ಪ್ರಶ್ನಿಸುವವರನ್ನು ಬೆದರಿಸಿ ಬಾಯಿ ಮುಚ್ಚಿಸುವ ತಂತ್ರವೇ ದೈಹಿಕ ಹಲ್ಲೆಗಳು

ಏಪ್ರಿಲ್ ೨ರ ಮಧ್ಯಾಹ್ನ ೩. ೩೦ರ ಹೊ ತ್ತಿಗೆ ಡಾ|| ಪ್ರಸಾದ್‌ರನ್ನು ಕಾಣಲು ಆಸ್ಪ ತ್ರೆಗೆ ಹೋಗಿ ಬೈಕ್ ನಿಲ್ಲಿಸುವಷ್ಟರಲ್ಲಿ, ಆಟೋರಿಕ್ಷಾವೊಂದರಲ್ಲಿ ತನ್ನಿಬ್ಬರು ಜೊತೆ ಗಾರರೊಡನೆ ಅಲ್ಲಿಗೆ ಬಂದ, ಕುಡಿದು ಮತ್ತ ನಾಗಿದ್ದ ಗುಣವಂತೆ ಪರಮೇಶ್ವರ ನನಗೆ ಅಡ್ಡ ನಿಂತು, "ಮೊನ್ನೆ ಗುಬ್ಬಗದ್ದೆ ನೀರಿನ ಯೋಜನೆ ಬಗ್ಗೆ ಏನೋ ಮಾತಾಡಿದೆ ಯಲ್ಲ, ಏನು ಹೇಳು" ಎಂದನು.

ತಂದೆ–ತಾಯಿ, ಗುರು–ಹಿರಿಯರಂಥ ಯೋಗ್ಯತೆಯ ಸ್ಥಾನದವರು ಅಥವಾ ಆ ತ್ಮೀಯ ಗೆಳೆಯರ ಹೊರತು ಇದಾವುದೋ ಏನೂ ಯೋಗ್ಯತೆಯಿಲ್ಲದ ನರಹುಳವೊಂ ದು ಹೀಗೆ ಏಕವಚನದಲ್ಲಿ ಸಂಬೋಧಿಸಿದಾಗ ಸಿಟ್ಟು ಬಂದಿದರೂ ಸಮಾಧಾನಿಸಿ, "ಹೇಳುವು ದೇನು? ಗುಬ್ಬಗದ್ದೆಗೆ ಮಂಜೂರಾದ ಯೋ ಜನೆಯ ಕೆಲಸ ಗುಬ್ಬಗದ್ದೆಯಲ್ಲೇ ಆಗ ಬೇಕು...." ಎಂದೆ.

"ಅದನ್ನು ಕೇಳಲು ನೀನ್ಯಾರು ಸೂ. ಮಗನೆ...." ಮುಂತಾಗಿ ಅವಾಚ್ಯವಾಗಿ ಮಾತನಾಡುತ್ತ, ತನ್ನ ಮುಷ್ಟಿಯಿಂದ ನನ್ನ ಮುಖ, ದವಡೆ, ತಲೆಗಳ್ಳ ಹೊಡೆಯ ತೊಡಗಿದ. ಅವನ ಜೊತೆಗಿದ್ದ ಇನ್ನಿಬ್ಬರೂ ಆಟೋದಿಂದ ಇಳಿದು ಬಂದು ನನ್ನ ಸುತ್ತ ನಿಂತು ಏನೋ ಜೋರು ಮಾಡತೊಡಗಿ ದಾಗ, ಇನ್ನು ಬಿಟ್ಟ ತಿನ್ನುತ್ತ ನಿಂತ್ರ ಉಪಯೋಗವಿಲ್ಲವೆಂದು, ಅಲ್ಲಿಂದ ತಪ್ಪಿಸಿ ಕೊಂಡು, ಆಸ್ಪತ್ರೆಯೊಳಕ್ಕೆ ಹಿಂದಿನಿಂದ ಹೋದೆ. ಹಾಗೆ ಹೋಗುವಾಗ ಹಿಂದಿನಿಂದ ಇವರುಗಳು ಪುನಃ ಏರಿ ಬರುವುದು ಕಂಡು ಒಂದು ಕಲ್ಲು ಎತ್ತಿಕೊಂಡೆ. ಆಗ ಹಿಂದೆ ಸರಿದು ನಿಂತ ಪರಮೇಶ್ವರ, "ಕಲ್ಲು ಹೊಡೀ ತೀಯಾ ? ಹೊಡಿ...." ಎನ್ನುತ್ತಾ ತಾನೇ ಒಂದೆರಡು ಕಲ್ಲು ಬೀಸಿದ. ಸದ್ಯ ಅದು ಅಲ್ಲಿ ತಿರುಗಾಡುತ್ತಿದ್ದ ರೋಗಿಗಳಿಗಾಗಲಿ ಇತರರಿ ಗಾಗಲಿ ಬಡಿಯಲಿಲ್ಲ.

ನಾನು ಬಾಯಿಂದ ಒಸರುತ್ತಿದ್ದ ರಕ್ತ ವನ್ನು ಸೇರಿಸಿ ಎರಡು ಬಾರಿ ಅವನ ಕಡೆಗೆ "ಥೂ!" ಎಂದು ಉಗಿದು, ಡಾ|| ಪ್ರಸಾ ದರ ಕೋಣೆಗೆ ಹೋದೆ. ಅಲ್ಲಿ ಡಾಕ್ಟರು ಏನಾಯಿತೆಂದು ವಿಚಾರಿಸುವಷ್ಟರಲ್ಲಿ ಅಲ್ಲಿ ಗೂ ನುಗ್ಗಿ ಬಂದ ಈತ, "ಇಲ್ಲಿ ರಕ್ಷಣೆ ಪಡೀತೀಯಾ ನಾಯಿ.... ನಿನ್ನನ್ನು ಇವ ತ್ತು ಮುಗಿಸಿಯೇ ಹೋಗೋದು...." ಮುಂತಾಗಿ ತನ್ನ ಅರ್ಹತೆಗೆ ತಕ್ಕಂತೆ ನಿಂದಿ ಸುತ್ತ, ಡಾಕ್ಟರು ತಡೆಯುತ್ತಿದ್ದಂತೆಯೇ ಮುಷ್ಟಿಯಿಂದ ನನ್ನ ತಲೆಗೆ ಮತ್ತೂ ಮೂ ರ್ನಾಲ್ಕು ಏಟು ಕೊಟ್ಟ. ಅಷ್ಟರಲ್ಲಿ ಡಾಕ್ಟ ರು ಮತ್ತು ಅವರ ಸಿಬ್ಬಂದಿ ಅವನನ್ನು ಆಚೆಗೆ ಕಳಿಸಿ ಬಾಗಿಲು ಹಾಕಿಕೊಂಡರು.

ನನ್ನ ತುಟಿಗಾದ ಗಾಯಗಳನ್ನು, "ಎಕ್ಸ್‌ರೇ"ಗಳನ್ನೂ ಪರೀಕ್ಷಿಸಿ, ಏನೂ ಗಾಬರಿಯಿಲ್ಲವೆಂದು ಖಾತ್ರಿಪಡಿಸಿಕೊಂಡು, ಒಂದು 'ಟಿಟನಸ್' ಇಂಜೆಕ್ಷನ್ ಕೊಟ್ಟ ಡಾಕ್ಟರು, ನನ್ನನ್ನು ಸ್ವಲ್ಪ ಹೊತ್ತು ಕೂರಿ ಸಿಕೊಂಡು ನಂತರ ಮನೆಗೆ ಕಳಿಸಲು ಹೊರ ಗೆ ಬೈಕಿನ ಹತ್ತಿರ ಬಂದರು. ಆದರೆ ಅಲ್ಲೇ ಕಾಯುತ್ತಿದ್ದ ಪರಮೇಶ್ವರ, "ಇವತ್ತು ನಿ ನ್ನನ್ನು ಮುಗಿಸದೆ ಹೋಗೋಲ್ಲ...." ಎನ್ನು ತ್ತ ಮತ್ತೊಮ್ಮೆ ಮೈಮೇಲೆ ಬಂದ. ಡಾ ಕ್ಟರು ಅವನನ್ನು ತಬ್ಬಿ ಹಿಡಿದುಕೊಂಡು ನನ್ನನ್ನು ಪುನಃ ಒಳಗೆ ಕಳಿಸಿದರು. ಕೆರಳಿದ ಆತ ನನ್ನ ಬೈಕನ್ನು ಕೆಡವಿ, ಹೆಲ್ಮೆಟ್ಟನ್ನು ನೆಲಕ್ಕೆ ಕುಕ್ಕಿ, ಸಾಕಷ್ಟು ಹಾನಿ ಪಡಿಸಿದ. ಟ್ಯಾಂಕಿನ ತುಂಬ ಹಳ್ಳಿಗೆ ಹೋಗಲಿಕ್ಕಾಗಿ ತುಂಬಿಸಿಕೊಂಡಿದ್ದ ಪೆಟ್ರೋಲ್ ನೆಲದ ಪಾ ಲಾಯಿತು.

ಆಮೇಲೆ ನಾನು ಪೋಲಿಸ್ ಠಾಣೆಗೆ ಫೋನ್ ಮಾಡಿ, ಪೋಲೀಸರೊಬ್ಬರ ಜೊತೆ ಠಾಣೆಗೆ ಹೋಗಿ ದೂರು ಸಲ್ಲಿಸಿದೆ. ನಂತರ ಜಿಲ್ಲಾ ಪತ್ರಕರ್ತರ ಸಂಘಕ್ಕೂ ದೂರು ಸಲ್ಲಿ ಸಿದೆ.

* * *

ಪರಮೇಶ್ವರ ಹಲ್ಲೆಗೆ ಮೊದಲು ಪ್ರಸ್ತಾ ಪಿಸಿದ ಗುಬ್ಬಗದ್ದೆ ನೀರಿನ ವಿಚಾರ ಇದು:—

ಗುಬ್ಬಗದ್ದೆಯ ಜನ ಹಲವಾರು ವರ್ಷ ಗಳಿಂದಲೂ ಗುಡ್ಡದ ಮೇಲ್ಗಡೆ ಇರುವ ಸ ರ್ಪಿನಿಂದ ಕುಡಿವ ನೀರಿನ ಸೌಕರ್ಯವನ್ನು ಕಲ್ಪಿಸಿಕೊಡುವಂತೆ ಅರ್ಜಿ ಕೊಡುತ್ತ ಬಂ ದಿದ್ದು, ೨ ವರ್ಷದ ಹಿಂದೆ ಜಿಲ್ಲಾ ಪರಿಸಾ ಸತ್ತಿನ ಸಮಾವೇಶ ಚಿಕ್ಕಮಗಳೂರಿನಲ್ಲಿ ನಡೆದಾಗ ಪುನಃ ಜಿ. ಪ. ಅಧ್ಯಕ್ಷ ಬಿ.ಎಲ್. ರಾಮದಾಸ್‌ರಿಗೆ ಇನ್ನೊಂದು ಮನವಿ ಸಲ್ಲಿ ಸಿ, ಕುಡಿವ ನೀರಿನ ಅಗತ್ಯ ಮನಗಾಣಿಸಿದ್ದ ರು.

ಈಚಿಗೆ ಕಾಡಿನ ಚಳುವಳಿ ಸಮಯದಲ್ಲಿ ಕಾಡಿಗೆ ಭೇಟಿ ಕೊಟ್ಟಿದ್ದ ಜಿಲ್ಲಾಧಿಕಾರಿಗಳಿ ಗೂ ಮನವಿ ಮಾಡಿದಾಗ ಅವರು ಜಿಲ್ಲಾ ಪರಿಷತ್ತಿಗೆ ಶಿಫಾರ್ಸು ಮಾಡುವ ಭರವಸೆ ಕೊಟ್ಟಿದ್ದರು ಅಷ್ಟರಲ್ಲಿ ಜವಾಹರ್ ರೋ ಜ್ಗಾರ್ ಯೋಜನೆ ಜಿಲ್ಲಾಧಿಕಾರಿಗಳ ಹತೋ ಟಿಗೆ ಬಂದಿದ್ದರಿಂದಲೋ ಏನೋ, ಈ ಉ ದ್ದೇಶದ ಯೋಜನೆ ಮಂಜೂರಾಗಿಬಿಟ್ಟಿತು.

ಆದರೆ ಅದು ಬಂದದ್ದೂ ಗೊತ್ತಿಲ್ಲ, ಹೋದದ್ದೂ ಗೊತ್ತಿಲ್ಲ ಎಂಬಂತಾಗಿಬಿಡು ತ್ತಿತ್ತು. ಅದನ್ನು ಗುಬ್ಬಗದ್ದೆಯಲ್ಲಿ ಆಗ ಗೊಡದೆ, ಗುಣವಂತೆಗೆ ವರ್ಗಾಯಿಸಲು ಪರಮೇಶ್ವರ ತಹಸೀಲ್ದಾರರಲ್ಲಿ ಚಿತಾವಣೆ ನಡೆಸಿದ್ದು ಆಕಸ್ಮಾತ್ ಅಲ್ಲಿಗೆ (ಮಾ. ೩೦ ರಂದು) ಹೋಗಿದ್ದ ನನಗೆ ಗೊತ್ತಾಗಿ, ನಾ ನು "ಆ ಯೋಜನೆ ಗುಬ್ಬಗದ್ದೆಯಲ್ಲೇ ಆ ಲಿ. ಗುಣವಂತೆಗೆ ಬೇಕಾದರೆ ಒಂದಲ್ಲ ನಾ ಲ್ಕು ಯೋಜನೆ ಮಂಜೂರು ಮಾಡಿಸಿ ಕೊಳ್ಳಿ. ಹೇಗೂ ನಿಮ್ಮದೇ ಅಧಿಕಾರವಿದೆ. ಈ ದಿವಾಳಿ ಸರ್ಕಾರಗಳಲ್ಲಿ ಹೇಗೋ ಕಷ್ಟ ದಿಂದ ಮಂಜೂರಾಗಿರುವ ಒಂದು ಯೋ ಜನೆಯನ್ನು ರದ್ದು ಮಾಡುವ ಕೆಲಸ ಮಾಡ ಬೇಡಿ" ಎಂದೆ.

(೩ನೇ ಪುಟಕ್ಕೆ)

“ಆ ಮೆ”

(೨ನೇ ಪುಟದಿಂದ)

ಹೊರ ಒಳಗೂ ಅಳಿದದ್ದೇ ಸಂಭ್ರಮ.

ಈ ಎಲ್ಲದರ ಮುಂದಿನ ಅಂಕವೇ, ಕೆಪಿ ಪ್ಪದ ಕೆಲವು ಸಹೃದಯಿಗಳ ಸತತ ಯತ್ನದಿಂದ ಸಂಘಟಿಸಲ್ಪಟ್ಟ ೩೧ ೩-೯೧ರ ಮೊದಲ ಸಭೆ.

ಈ ಮಹಿಳಾ ಸಭೆ ಯಾವುದೇ ವಿಾಸಲಾತಿಯಿಂದ ಬಂದ ಅಥವಾ ಸರ್ಕಾರದ ದುಡ್ಡಿನಲ್ಲಿ ನಡೆಯುವ ಅಥವಾ ಅಧಿಕಾರಿಗಳ ‘ಗುರಿ’ಮುಟ್ಟಿನ ಅಥವಾ ರಾಜಕಾರಣಿಗಳ ರಾಜಕೀಯ ಲೆಕ್ಕಾಚಾರಗಳ ಯೋಜನೆಯ ಯತ್ನ ಅಲ್ಲ. ಮಹಿಳೆಯರಿಗೆ ಏನೋ ಮಹತ್ಕಾರ್ಯ ಮಾಡುತ್ತಿದ್ದೇವೆ ಎಂದು ಅಂಕೆ ಸಂಖ್ಯೆಗಳನ್ನು ಲೆಕ್ಕ ಮಾಡುವ ವ್ಯವಹಾರದ ಸಭೆಯೂ ಅಲ್ಲ. ನೈಜವಾಗಿಯೂ ಆತ್ಮಸಾಕ್ಷಿಯಿಂದ. ಮಹಿಳೆಯರ ಬಗ್ಗೆ ಪ್ರಾಮಾಣಿಕ ಕಾಳಜಿ ಇರುವವರ ಭೇಟಿ ಮತ್ತು ಪರಸ್ಪರ ಸಹಕಾರಕ್ಕೆ ಮಾತ್ರ ಈ ಸಭೆ.

ಈ ಸಂಘಟನೆಯು ಅಂತಿಮವಾಗಿ ಏನನ್ನೂ ಸಾಧಿಸದೆ ಹೋದರೂ ಸದಸ್ಯರ ವೈಯಕ್ತಿಕ ತಿಳುವಳಿಕೆಯ ಬೆಳವಣಿಗೆ, ಆತ್ಮಸ್ಥೈರ್ಯವನ್ನು ಹೆಚ್ಚಿಸಲು ಸಾಧನವಾಗಬಲ್ಲುದು ಎಂಬುದು ಮಾತ್ರ ಖಂಡಿತ. ಆಮೆಯಾದರೂ ಸರಿಯೆ, ಗುರಿ ಮುಟ್ಟುವುದು ನಿಸ್ಸಂಶಯ. ನಿಶ್ಚಿತ ಮನಸ್ಸಿನ ಸತತ ಯತ್ನದ ಅಚಲ ದೃಷ್ಟಿಯ ದೀರ್ಘಾಯುಷಿ ಆಮೆಯಾಗೋಣವೆ?

ತಾ|| ೩೧-೩-೯೧ರ ಮೊದಲ ಸಭೆಗೆ ನಮ್ಮ ನಿರೀಕ್ಷೆಗಿಂತ ಹೆಚ್ಚಾಗಿ, ಕೊಪ್ಪ ಮತ್ತು ನ. ರಾ. ಪುರ ತಾಲ್ಲೂಕುಗಳ ೧೮ ಜನ ಆಸಕ್ತ ಮಹಿಳೆಯರು ಬಂದಿದ್ದರು. ನಮ್ಮ ಸಂಘಟನೆಗೆ ‘ಜಾಗೃತಿ’ ಎಂಬ ಹೆಸರು ತೀರ್ಮಾನವಾಯಿತು.

ಮಹಿಳೆಯರ ಸಮಸ್ಯೆಗಳ ಬಗ್ಗೆ ನಾವು ಯಾವ ಯಾವ ರೀತಿಗಳಲ್ಲಿ ಸ್ಪಂದಿಸಬಹುದು, ನಮ್ಮ ಇತಿ–ಮಿತಿಗಳೇನು, ಅವುಗಳನ್ನು ಹೇಗೆ ವಿಸ್ತರಿಸಿಕೊಳ್ಳಬಹುದು ಎಂಬ ಬಗ್ಗೆ ಚರ್ಚಿಸಿದೆವು. ಮೊದಲಿಗೆ ನಮ್ಮ ತಿಳುವಳಿಕೆಯನ್ನು ಬೆಳೆಸಿಕೊಳ್ಳಬೇಕೆಂದು, ಕಡ್ಡಾಯವಾಗಿ ತಿಂಗಳಿಗೊಮ್ಮೆ ಯಾರಾದರೊಬ್ಬ ಸದಸ್ಯೆಯ ಮನೆಯಲ್ಲಿ (ಎಲ್ಲರೂ ಅವರ ಊರಿಗೆ ನಮ್ಮ ನಮ್ಮ ಖರ್ಚಿನಲ್ಲೇ ಹೋಗಿ) ಸೇರಿ, ಬದುಕಿಗೆ ಸಂಬಂಧಪಟ್ಟ ಯಾವುದಾದರೊಂದು ವಿಚಾರವನ್ನಿಟ್ಟುಕೊಂಡು ಚರ್ಚಿಸಬೇಕು. ಅನಂತರ ಆ ಚರ್ಚೆಯ ಬಗ್ಗೆ ಸಂಕ್ಷಿಪ್ತವಾಗಿ ಲೇಖನ ಬರೆದು ಪತ್ರಿಕೆಗಳಿಗೆ ‘ಜಾಗೃತಿ’ಯ ಹೆಸರಿನಲ್ಲಿ ಕಳಿಸಿಕೊಡಬೇಕು. ಹೀಗೆ ನಮ್ಮನ್ನು ನಮ್ಮ ಸಂಘವನ್ನು ಬೆಳೆಸಬೇಕೆಂದು ನಿರ್ಧರಿಸಿದೆವು.

ಅಂತೆಯೇ ಯಾವುದಾದರೂ ಮಹಿಳಾ ಸಮಸ್ಯೆಯೊಂದ ನಮಗೆ ಎದುರಾದಲ್ಲಿ, ಆಯಾ ಊರಿನ ಅಥವಾ ಹತ್ತಿರದಲ್ಲಿರುವ ಸದಸ್ಯೆ ಆ ವಿಚಾರದಲ್ಲಿ ಮುಂದೆ ನಿಂತು, ಉಳಿದ ನಮ್ಮನ್ನೆಲ್ಲ ಸೇರಿಸಿಕೊಂಡು, ನಮಗೆ ಸಾಧ್ಯವಿರುವ ರೀತಿಯಲ್ಲಿ ಸ್ಪಂದಿಸಬೇಕು ಎಂದೂ ನಿರ್ಧರಿಸಿದೆವು.

ಈ ನಿಟ್ಟಿನಲ್ಲಿ, ಇದೇ ಏಪ್ರಿಲ್ ೧೪ರ ಭಾನುವಾರ ಬೆಳಗ್ಗೆ ೧೦ ಗಂಟೆಗೆ ಎಲ್ಲರೂ ಬಸ್ರಿಕಟ್ಟೆಯ ಕಸ್ತೂರಬಾ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ವಸುಮತಿ ಎಸ್ ಮೂರ್ತಿಯವರ ಮನೆಯಲ್ಲಿ ಭೇಟಿಯಾಗಲು ನಿರ್ಧರಿಸಿದ್ದೇವೆ.

‘ಜಾಗೃತಿ’ಗೆ ಸೇರಲು ಆಸಕ್ತಿಯಿರುವವರು ಈ ಕೆಳಕಂಡವರಲ್ಲಿ ಯಾರನ್ನಾದರೂ ಸಂಪರ್ಕಿಸಬಹುದು:—

ಶ್ರೀಮತಿ ಸುಜಾತಾ, ಮಂಡಲ ಸದಸ್ಯೆ, ಭಾರತ್ ಕ್ಲಬ್ ಮಿಲ್ ಹತ್ತಿರ, ಕೊಪ್ಪ; ಶ್ರೀಮತಿ ಫಾತಿಮಾ ಕೋಂ [illegible] ಸಾಹೇಬ್, ಭಾರತ್ ಕ್ಲಬ್ ಮಿಲ್ ಎದುರು, ಕೊಪ್ಪ; ಶ್ರೀಮತಿ ಪ್ರೇಮನ್ನೀಸಾ, ಭಾರತ್ ಕ್ಲಬ್ ಮಿಲ್ ಹತ್ತಿರ; ಶ್ರೀಮತಿ ಪರಿಮಳಮ್ಮ ಕೋಂ ಕೃಷ್ಣನ್, ಮುಖ್ಯೋಪಾಧ್ಯಾಯರು, ಭಾರತ್ ಕ್ಲಬ್ ಮಿಲ್ ಹತ್ತಿರ; ಟಿ ಕೆ ಹೇಮಲತಾ, ಇಂಡಿಯನ್ ಬ್ಯಾಂಕ್ ಎದುರು, ಕೊಪ್ಪ; ಅಧ್ಯಕ್ಷೆ–ಮತ್ತು ಸದಸ್ಯರು, ವಿದ್ಯಾ ಮಹಿಳಾ ಸಮಾಜ, ಬಾಳಗಡಿ, ಕೊಪ್ಪ; ಹೇಮಾವತಿ ಶೆಟ್ಟಿ, ಸಿಂಡಿಕೇಟ್ ಬ್ಯಾಂಕ್, ಕೊಪ್ಪ; ಶ್ರೀಮತಿ ವಸುಮತಿ ಎಸ್. ಮೂರ್ತಿ, ಬಸ್ರಿಕಟ್ಟೆ, ಕೊಪ್ಪ ತಾಲ್ಲೂಕು; ಅಧ್ಯಕ್ಷರು ಮತ್ತು ಸದಸ್ಯರು, [illegible] ಯುವತಿ ಮಂಡಳಿ, [illegible], ನ. ರಾ. ಪುರ ತಾಲ್ಲೂಕು.

ಹಾಂ, ನಿಲ್ಲಿ. ನಮ್ಮ ಈ ಬರಹಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರತಿಕ್ರಿಯಿಸಿದ ಎಲ್ಲರಿಗೂ ನನ್ನ ಆತ್ಮೀಯ ವಂದನೆಗಳು. ಎಲ್ಲ ಆಸಕ್ತ, ಸಹೃದಯರನ್ನೂ ‘ಜಾಗೃತಿ’ಯಲ್ಲಿ ನಿರೀಕ್ಷಿಸಲೆ?

—ಶಶಿಕಲಾ ಉರಣ್ಕರ್,
‘ಸ್ಪಂದನ’, ನ. ರಾ. ಪುರ

ಹಲ್ಲೆ, ದೌರ್ಜನ್ಯಗಳೆದುರು ವೈಚಾರಿಕ ಮನಸ್ಸುಗಳೇ ಆಶಾಕಿರಣ

ಆತ್ಮೀಯ ನಾಗರಾಜ್,

ಗುಣವಂತ ಪರಮೇಶ್ ಎಂಬ ಅವಿವೇಕಿ ರಾಜಕಾರಣಿಯೊಬ್ಬ ನಿಮ್ಮ ಮೇಲೆ ಹಲ್ಲೆ ಮಾಡಿ ಮಾನಸಿಕ ಮತ್ತು ದೈಹಿಕವಾಗಿ ಆಘಾತಗೊಳಿಸಿರುವುದು ನಮ್ಮ ಮನಸ್ಸಿಗೆ ಅತೀವ ದುಃಖ ಉಂಟು ಮಾಡಿದೆ.

ಪಾಳೇಗಾರಿ ಮನೋಭಾವದ ರಾಜಕಾರಣಿಗಳು ಮತ್ತು ಧಾರ್ಮಿಕ ಮೂಲಭೂತವಾದಿಗಳ ನೆಲದಲ್ಲಿ ಜಾತ್ಯತೀತ ಧೋರಣೆಯ ನಿಮ್ಮ ಪತ್ರಿಕೆಯು ಮೂಲಕ ಒಂದು ವೈಚಾರಿಕ ವಾತಾವರಣ ಸೃಷ್ಟಿಸಲು ಹೊರಟಾಗಿನಿಂದ ಹಲ್ಲೆ ಮತ್ತು ದೌರ್ಜನ್ಯದ ಸರಣಿಯನ್ನು ನೀವು ಎದುರಿಸುತ್ತಲೇ ಬಂದಿದ್ದೀರಿ. ಈ ಅನೈತಿಕ ಕ್ರಿಯೆಯು ಹಿಂದೆ ಸ್ಥಳೀಯ ಪುಢಾರಿ ರಾಜಕಾರಣಿಗಳು, ಅವರ ಸೂತ್ರದ ಗೊಂಬೆಗಳು, ಮತಾಂಧ ಶಕ್ತಿಗಳು ನಿಶ್ಚಳವಾಗಿ ಕೆಲಸ ಮಾಡುತ್ತ ಬಂದಿವೆ. ಆದರೆ ಆಶಾಕಿರಣದಂತಿರುವ ವೈಚಾರಿಕ ಮನಸ್ಸುಗಳು ನಿಮ್ಮ ಪರವಾಗಿರುವುದರಿಂದಲೇ ನೀವು ಮತ್ತು ನಿಮ್ಮ ಪತ್ರಿಕೆ ದೃಢವಾಗಿ ಉಳಿದಿದ್ದೀರಿ.

ಈ ಹಲ್ಲೆ ನೀವು ಎದುರಿಸುತ್ತಲೇ ಬಂದ ಸಮಾಜ ವಿರೋಧಿ ಶಕ್ತಿಗಳ ಇನ್ನೊಂದು ಅಸಹ್ಯ ಕ್ರಮ. ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತ ಸಾಮಾನ್ಯ ಓದುಗರಿಗೆ ಸತ್ಯ ಹೇಳಲು ಹೊರಟ ಪತ್ರಕರ್ತನನ್ನು ದೈಹಿಕ ಮತ್ತು ಮಾನಸಿಕವಾಗಿ ಜರ್ಝರಿತಗೊಳಿಸಿ ಬಾಯಿ ಮುಚ್ಚಿಸಿ, ಪತ್ರಿಕಾ ಸ್ವಾತಂತ್ರ್ಯವನ್ನೇ ಉಸಿರುಗಟ್ಟಿಸುವ ಸಂಚು ಇದು. ಇಂಥ ಪಾಶವೀ ಪ್ರದರ್ಶನಗಳಿಂದ ಪತ್ರಿಕಾ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯನ್ನು ತಮ್ಮ ವಶಮಾಡಿಕೊಳ್ಳಲೆತ್ನಿಸುವ ದುಷ್ಟಶಕ್ತಿಗಳ ಹುನ್ನಾರವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಅಷ್ಟೇ ಅಲ್ಲ ಸಮಾಜದ ಬಗ್ಗೆ ಪ್ರೀತಿ ಇರುವ ಎಲ್ಲರೂ ಈ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವನ್ನು ಖಂಡಿಸಲು ಮುಂದಾಗಬೇಕೆಂದು ಬಯಸುತ್ತೇವೆ.

ಪತ್ರಿಕೋದ್ಯಮ ಜನಪರವಾಗಿರಬೇಕೆಂಬ ಪ್ರಬಲ ನಂಬಿಕೆ ಇರುವ ನಾವು ಈ ಹಲ್ಲೆಯಿಂದ ನಿಮ್ಮಷ್ಟೇ ವೈಯಕ್ತಿಕ ನೋವು ಅನುಭವಿಸುತ್ತಿದ್ದೇವೆ. ಈ ಬಗ್ಗೆ ಸಂಬಂಧಪಟ್ಟವರ ಮೇಲೆ ತೀಕ್ಷ್ಣ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳನ್ನೂ, ಇತರೆ ಸಂಬಂಧಪಟ್ಟ ಅಧಿಕಾರಿಗಳನ್ನೂ ನಾವು ಒತ್ತಾಯಿಸಿದ್ದೇವೆ.

ಒಂದು ನಾಗರಿಕ ಸಮಾಜ ಈ ಹಲ್ಲೆಯನ್ನು ಖಂಡಿಸುತ್ತದೆಂಬ ನಂಬಿಕೆಯೇ ನಿಮಗೆ ಪ್ರಚಂಡ ನೈತಿಕ ಶಕ್ತಿ, ಆತ್ಮವಿಶ್ವಾಸ ನೀಡಲಿ ಮತ್ತು ಅದೇ ಕಾಲಕ್ಕೆ ನಿಮ್ಮ ಮೇಲೆ ಕೈ ಮಾಡಿದ ನೀಚ ಶಕ್ತಿಗಳ ಎದೆಗುಂದಿಸಲಿ ಎಂದು ನಾವು ಆಶಿಸುತ್ತೇವೆ.

ಕಂ. ಕ. ಮೂರ್ತಿ.
ದಿನೇಶ್ ಪಟವರ್ಧನ್,
ಆ ರಾ. ಪ್ರಸಾದ್,
ಪತ್ರಕರ್ತರು, ಚಿಕ್ಕಮಗಳೂರು.

“ಹಲ್ಲೆಕೋರರ ಬಗ್ಗೆ ಹೇಸಿಕೆ, ವಾಕರಿಕೆ”

ಪ್ರಿಯ ಶ್ರೀ ನಾಗರಾಜ್,

ನಿಮ್ಮ ಮೇಲಾದ ಹಲ್ಲೆ ತಿಳಿದು ದುಃಖ, ಹಾಗೂ ಗೂಂಡಾ ಮನೋಭಾವದ ಹಲ್ಲೆಕಾರರ ಬಗ್ಗೆ ಹೇಸಿಕೆ ಆಯಿತು. ವಿ [illegible] ನಾವೂ ಬದುಕಿದ್ದೇವೆ. ಇದಾ [illegible] ಅಸಂಖ್ಯಾತ ಮನುಷ್ಯರು ಇದ್ದಾರೆ. ಅವರಿಂದ ಈ ರಾಕ್ಷಸರು [illegible]. [illegible] ಬಗ್ಗೆ ವಾಕರಿಕೆ ಬರುತ್ತದೆ. ಅವರೀಗ ಇಂಥವರಿಗೆ [illegible]?

ನಿಮ್ಮ,
—ಶ್ರೀವತ್ಸ, ಹೇರೂರು.

ಬೆದರಿಸಿ ಬಾಯಿ ಮುಚ್ಚಿಸುವ ತಂತ್ರವೇ ದೈಹಿಕ ಹಲ್ಲೆಗಳು

(೨ನೇ ಪುಟದಿಂದ)

. ಅಲ್ಲದೆ, ತಕ್ಷಣ ಗುಬ್ಬಗದ್ದೆಯವರಿಗೆ ಈ ವಿಷಯ ತಿಳಿಸಿದೆ. ಅವರು ಕೂಡಲೇ ಚಿಕ್ಕಮಗಳೂರಿಗೆ ಹೋಗಿ, ಜಿಲ್ಲಾಧಿಕಾರಿಗಳನ್ನು ಕಂಡು, ತಮ್ಮ ಯೋಜನೆಯನ್ನು ಸ್ಥಗಿತಗೊಳಿಸದಂತೆ ಮನವಿ ಮಾಡಿ ಬಂದರು.

ಈ ಹಲ್ಲೆಗೆ ಇದು ತಕ್ಷಣದ ಕಾರಣವೆಂದು ಕಂಡರೂ ಸಹ, ಹಿಂದಿನಿಂದಲೂ ಅವನ ನೂರಾರು ಅನಾಚಾರಗಳಲ್ಲಿ ಕೆಲವಾದರೂ ನಮ್ಮ ಪತ್ರಿಕೆಯಲ್ಲಿ ಬೆಳಕು ಕಂಡಿದ್ದರ ಬಗೆಗೆಲ್ಲ ಆತನಿಗಿದ್ದ ಕೊಬ್ಬನ್ನು ಮೊನ್ನೆ ತೀರಿಸಿಕೊಳ್ಳಲು ಯತ್ನಿಸಿದ್ದಿರಬಹುದು.

ಅಲ್ಲದೆ, ಕಳೆದ ವಾರದ (೩೧-೩-೯೧) ನಮ್ಮ ಪತ್ರಿಕೆಯಲ್ಲಿ ಆಗೋಡು ದ್ವಾರಕ್ರಾಫ್ಟಿಂದ ಬಗ್ಗೆ ಬರೆದಿದ್ದಕ್ಕೆ ತಾನು ಹೀಗೆ ಹಲ್ಲೆ ಎಸಗಿದ್ದಾಗಿ ಪೇಟೆಯಲ್ಲಿ ಕೆಲವೆಡೆ ಹೇಳಿಕೊಂಡನಂತೆ. ಇದೂ ಕೂಡ ಈ ಹಲ್ಲೆಯ ಹಿನ್ನೆಲೆಯಾಗಿರಬಹುದು.

ಎಲ್ಲ ಬಗ್ಗೆಯೂ ಯೋಚಿಸುವಂತೆ, ಈ ದುಷ್ಕೃತ್ಯವನ್ನು ಅನಾಚಾರಗಳನ್ನು ಪ್ರಶ್ನಿಸುವವರನ್ನು ಅಥವಾ ಅವಕ್ಕೆ ಅಡ್ಡಿಯಾಗುವವರನ್ನು ಬೆದರಿಸಿ ಬಾಯಿ ಮುಚ್ಚಿಸುವ ಯತ್ನವೇ ಇಂಥ ದೈಹಿಕ ಹಲ್ಲೆಗಳ ಉದ್ದೇಶ. ತಮ್ಮದು ನ್ಯಾಯದ ಮಾರ್ಗವಾಗಿದ್ದರೆ, ತಮ್ಮ ಕೃತ್ಯಗಳನ್ನು ಸಮರ್ಥಿಸಿಕೊಳ್ಳುವ ನೈತಿಕ ಯೋಗ್ಯತೆ ಅವರಿಗೆ ಬರುತ್ತದೆ. ಅನಾಚಾರವೇ ಬದುಕಾಗಿರುವಾಗ, ಅದಕ್ಕೆ ಯಾರೂ ಅಡ್ಡಿ ಬರಬಾರದೆಂಬುದೇ [illegible] ಅಲ್ಲವೆ?

* * *

ಈ ಘಟನೆಯ ಬಗ್ಗೆ ಕೇಳಿದ ನೂರಾರು ಜನ ಖುದ್ದಾಗಿ ಬಂದು ಅಥವಾ ಫೋನ್ ಮಾಡಿ, ಹಲ್ಲೆಯ ಬಗ್ಗೆ ವಿಚಾರಿಸಿ, ಪತ್ರಿಕೆಯ ನಿಲುವಿಗೆ ಬೆಂಬಲ ವ್ಯಕ್ತಪಡಿಸಿ, ಹಲ್ಲೆಯ ಹೇಡಿ ರಾಜಕಾರಣವನ್ನು ಖಂಡಿಸುವುದು ಶಕ್ತಿಯ ಮೇಲಿನ ನಂಬಿಗೆಯಂಥ ಈ ವ್ಯಕ್ತಿಯಲ್ಲಿ ನನ್ನ [illegible] ಮಾಡಿದೆ.

[illegible]

ನಡೆಯುತ್ತಿದೆ. ಆ ಗುಬ್ಬಗದ್ದೆಯ ಹಲ್ಲೆ [illegible] [illegible] ಮತ್ತು ತೀವ್ರ ದುಃಖ ಮತ್ತು ಪ್ರತಿಭಟನೆ ವ್ಯಕ್ತಪಡಿಸಿದ್ದು ಎಂದೆಂದೂ ಮರೆಯಲಾಗದು.

ಇದರ ಜೊತೆಗೆ, ಇಂದು (ಏ ೩ ಭಾನುವಾರ) ವಿವಿಧ ಸಂಘಟನೆಗಳವರು, [illegible] [illegible] ಈ ಹಲ್ಲೆಗಳ ಬಗ್ಗೆ ತಮ್ಮ ತೀವ್ರ ಅಸಮ್ಮತಿ ವ್ಯಕ್ತಪಡಿಸಲು ಹೊರಟಿರುವುದು ಒಂದು [illegible] ಅಲ್ಲವೆ? [illegible] ನಮ್ಮ [illegible].

[illegible]

—ನಿಮ್ಮ ನಾಗರಾಜ್.

'ಹಲ್ಲೆಯನ್ನು ನಾಗರಿಕರೆಲ್ಲ ಪ್ರತಿಭಟಿಸಬೇಕು"

ಪ್ರಿಯ ಸಂಪಾದಕರೆ,

ತಾ|| ೨-೪-೯೧ರಂದು ನಿಮ್ಮ ಮೇಲೆ ನಡೆದ ಹಲ್ಲೆ ಪ್ರತಿಯೊಬ್ಬರೂ ಖಂಡಿಸಲೇ ಬೇಕಾದ ಒಂದು ಹೀನ ಕೃತ್ಯವಾಗಿದೆ

ಪ್ರಜಾತಂತ್ರದ ಬಣ್ಣದ ಮಾತುಗಳನ್ನಾಡುತ್ತ ದಬ್ಬಾಳಿಕೆಯನ್ನೇ ತಮ್ಮ ದಿನ ನಿತ್ಯದ ಜೀವನೋಪಾಯವನ್ನಾಗಿ ಮಾಡಿಕೊಂಡಿರುವ ಇಂಥ ದುಷ್ಟ ವ್ಯಕ್ತಿಗಳನ್ನು ತಮ್ಮ ಪಕ್ಷದ ದೊಡ್ಡ ಮುಖಂಡರಂತೆ ಪರಿಗಣಿಸಿ, ಅಂಥವರಿಗೆ ಮಂಡಲ ಪ್ರಧಾನರಂಥ ಜವಾಬ್ದಾರಿಯ ಹುದ್ದೆಯನ್ನು ಕಲ್ಪಿಸಿಕೊಟ್ಟಿರುವ ಆಳುವ ಪಕ್ಷದ ನಾಯಕರ ನೀತಿಯನ್ನೇ ಜನ ಅರ್ಥಮಾಡಿಕೊಳ್ಳಬೇಕಾಗಿದೆ.

ಜನಸಾಮಾನ್ಯರ, ದುಡಿವ ಜನತೆಯ, ದಲಿತರ ಮತ್ತಿತರ ಸಾಮಾನ್ಯ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ 'ಮುಂಜಾವು' ನಂಥ ಪತ್ರಿಕೆಯೊಂದರ ಸಂಪಾದಕರ ಮೇಲೆ ನಡೆದ ಹಲ್ಲೆಯನ್ನು, ನೆಮ್ಮದಿಯ ಬದುಕನ್ನು ಅಪೇಕ್ಷಿಸುವವರೆಲ್ಲರೂ ಪ್ರತಿಭಟಿಸಬೇ

ಪತ್ರಿಕೆಗಳ ಬಾಯಿ ಮುಚ್ಚಿಸುವ ಕರಾಳ 'ಕೈ'ಗಳ ಯತ್ನ ಖಂಡನೀಯ

ದಿನಾಂಕ. ೨-೪-೯೧ ರಂದು ಕೊಪ್ಪ ಕಾಂಗ್ರೆ ಪುಡಾರಿ ಹಾಗೂ ಮಂಡಲ ಪ್ರಧಾನ ಗುಣವಂತೆ ಪರಮೇಶ್ವರ 'ಮುಂಜಾವು' ಪತ್ರಿಕೆಯ ಸಂಪಾದಕರೂ ಗುಬ್ಬಗದ್ದೆ ಅರಣ್ಯ ರಕ್ಷಣಾ ಹೋರಾಟ ಸಮಿತಿಯ ಸಂಚಾಲಕರೂ ಆಗಿರುವ ಸಿರಿಮನೆ ನಾಗರಾಜ್‌ರವರ ಮೇಲೆ ನಡೆಸಿರುವ ಹಲ್ಲೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.

ಸಿರಿಮನೆ ನಾಗರಾಜ್‌ರವರ ನೇತೃತ್ವದಲ್ಲಿ ಗುಬ್ಬಗದ್ದೆ ಆರಣ್ಯ ರಕ್ಷಣೆಗಾಗಿ ನಡೆಸುತ್ತಿರುವ ಹೋರಾಟವನ್ನು ಮುರಿಯಲು ನಡೆಸುತ್ತಿರುವ ಹೀನ ಪ್ರಯತ್ನಗಳಲ್ಲಿ ಇದೂ ಒಂದಾಗಿದೆ ಎಂದು ಭಾವಿಸುತ್ತೇವೆ. ಹಾಗೆಯೇ, ದುಷ್ಟ ರಾಜಕಾರಣಿಗಳ ಕಪ್ಪು ಕೆಲಸಗಳನ್ನು ಬಯಲಿಗೆಳೆಯುವ ಪತ್ರಿಕೆಗಳ ಬಾಯಿ ಮುಚ್ಚಿಸಬಹುದೆಂಬ ಭ್ರಮೆ ಕೆಂದು ನಾವು ಕರೆಕೊಡುತ್ತೇವೆ.

—ಎ. ಆರ್. ರಾಮಚಂದ್ರ,
ಕಾರ್ಯದರ್ಶಿ,
ಭಾರತ ಕಮ್ಯುನಿಸ್ಟ್ ಪಕ್ಷ, ಕೊಪ್ಪ.

ಯೂ ಇಂಥ ಹೇಡಿತನದ ಹಲ್ಲೆಗೆ ಕಾರಣವಾಗಿದೆ.

ಜನತೆಯ ಹೋರಾಟಗಳನ್ನು ಮುರಿಯಲು ನಡೆಸುತ್ತಿರುವ ಇಂತಹ ಕ್ರಮಗಳನ್ನು ಪ್ರತಿಭಟಿಸಲು ಜನತೆ ಒಕ್ಕೊರಲಿನಿಂದ ಮುಂದೆ ಬರಬೇಕೆಂದು ನಾವು ಒತ್ತಾಯಿಸುತ್ತೇವೆ.

ಎಚ್. ಎಚ್. ದೇವರಾಜ್,
ರೈತ ಮುಖಂಡರು
ಎಂ. ಡಿ. ಗಂಗಯ್ಯ,
ದಲಿತ ಸಂಘರ್ಷ ಸಮಿತಿ
ಬಿ. ಕೆ. ಸುಂದರೇಶ್,
ಭಾರತ ಕಮ್ಯುನಿಸ್ಟ್ ಪಕ್ಷ
ಚಿಕ್ಕಮಗಳೂರು.

'ಸಹಕಾರ ಸಾರಿಗೆ'ಗೆ ಕೃತಜ್ಞತೆಗಳು

ಪ್ರಿಯರೆ,

ಶಂಕರ್ ಸಾರಿಗೆ ಸಂಸ್ಥೆಯ ಮುಷ್ಕರದಿಂದ ಮಲೆನಾಡಿನ ಜನತೆಯು ಬಹಳ ಕಷ್ಟವನ್ನು ಅನುಭವಿಸಿತ್ತು. ಅದರಲ್ಲೂ ಮೇಗೂರು ಮುಂತಾದ ಹಳ್ಳಿಗಳಿಗೆ ಬಹಳ ತೊಂದರೆಯಾಗಿತ್ತು. ಇಂತಹ ಸಂದರ್ಭದಲ್ಲಿ ಕಾರ್ಮಿಕರು ಸಂಘಟನೆಗೊಂಡ ಒಂದು ಸಾರಿಗೆ ಸಂಸ್ಥೆಯನ್ನು ಸ್ಥಾಪಿಸಿ, ಬಸ್ ಸೌಕರ್ಯವನ್ನು ಒದಗಿಸಿರುವುದು ಸಂತಸದ ವಿಷಯ. ಅವರು ಮೇಗೂರು ಮಾರ್ಗಕ್ಕೆ ಸಹ ತಮ್ಮ ಬಸ್ ಸೌಕರ್ಯವನ್ನು ಒದಗಿಸಿದ್ದಾರೆ

'ಸಹಕಾರ ಸಾರಿಗೆ'ಯ ಇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

—ಪ್ರಸನ್ನ, ಆಲಕ್ಕಿ–ಮೇಗೂರು.

'ಬಾಳ ಸಂಗಾತಿ' ಬೇಕು

ಪತ್ರಿಕೋದ್ಯಮ ವೃತ್ತಿಯಲ್ಲಿರುವ ಯುವಕನಿಗೆ, ಗೊಡ್ಡು ಸಂಪ್ರದಾಯಗಳ ಹೊರ ನಿಂತು ವೈಚಾರಿಕವಾಗಿ ಚಿಂತಿಸುವ, ಸರ್ಕಾರಿ ವೃತ್ತಿಯಲ್ಲಿರುವ ಸರಳ ವಿವಾಹ ಆಗ ಬಯಸುವ "ಬಾಳ ಸಂಗಾತಿ" ಬೇಕಾಗಿದ್ದಾಳೆ. ಶಿಕ್ಷಕಿಯರಿಗೆ ಆದ್ಯತೆ.

ಇತ್ತೀಚಿನ ಭಾವಚಿತ್ರದೊಂದಿಗೆ ಬರೆಯಿರಿ : ಬಾಕ್ಸ್ ನಂ. ೮, ಕೇರಾಫ್ 'ಮುಂಜಾವು', ಕೊಪ್ಪ.

ಅಡಿಕೆ ಧಾರಣೆ

ಶಿವಮೊಗ್ಗ ೫-೪-೯೧
ಸರಕು : ೭೮೦೯–೮೭೦೯
ಚಿಟ್ಟೆ : ೭೦೦೯–೭೮೮೯
ಗೊರಬಲು : ೩೯೧೦–೪೯೬೯

(ಸಾಗರದಲ್ಲಿ ವ್ಯಾಪಾರ ಶುರುವಾಗಿಲ್ಲವೆಂದು ಮ್ಯಾಮ್ಕೋಸ್ ಮೂಲಗಳಿಂದ ತಿಳಿದುಬಂದಿದೆ. —ಸಂ.)

ಕೊಪ್ಪ ಭೂ ಬ್ಯಾಂಕ್ ಅಧ್ಯಕ್ಷರ ಸ್ಪಷ್ಟೀಕರಣ

ಪ್ರಿಯರೆ,

ನಮ್ಮ ಬ್ಯಾಂಕಿನ ವಜ್ರಮಹೋತ್ಸವ ಸಮಾರಂಭದ ಬಗ್ಗೆ ನಿಮ್ಮ ೩೧-೩-೯೧ರ ಸಂಚಿಕೆಯಲ್ಲಿ ಕೆ.ಎಸ್. ಶಾಂತಾರಾಂ ಬರೆದಿರುವ ಪತ್ರಕ್ಕೆ ಸ್ಪಷ್ಟೀಕರಣ:

ನಮ್ಮ ಬ್ಯಾಂಕಿನ ವಜ್ರ ಮಹೋತ್ಸವ ೧೯೯೦ರ ಅಂತ್ಯದ ಒಳಗೆ ಆಗಬೇಕಾಗಿತ್ತು. ಶಾಸಕರಿಗಾಗಿಯೇ ಇದುವರೆಗೂ ಮುಂದೂಡಿ ಶಾಸಕರ ಬರುವಿಕೆಯನ್ನೇ ಕಾದು ಅವರು ಬರುವುದಿಲ್ಲ ಎಂಬ ಉತ್ತರ ಬಂದ ಮೇಲೆಯೇ ಕಾರ್ಯಕ್ರಮ ಮಾಡಿರುವುದು ಶಾಸಕರ ಹಿಂಬಾಲಕರಾದ ಶಾಂತಾರಾಮ್‌ರಿಗೆ ವಿಷಯಗೊತ್ತಿದ್ದು, ಸಂಘ-ಸಂಸ್ಥೆಯ ಪ್ರತಿನಿಧಿಯಾಗಿದ್ದೂ ಸಹ ಈ ಬೇಜವಾಬ್ದಾರಿ ಹೇಳಿಕೆ ನೀಡಿರುವುದು ವಿಷಾದವಾಗುತ್ತದೆ.

ದಿನಾಂಕ: ೩೧-೩-೯೧ ರಂದು ನಡೆದ ಸಮಾರಂಭದಲ್ಲಿ ಎಲ್ಲಾ ಪಕ್ಷಗಳಿಗೂ ಸೇರಿದ ರೈತರು ಹಾಗೂ ಸಾರ್ವಜನಿಕರು ಹಾಜರಾಗಿದ್ದು, ಈ ಸಭೆ ಯಶಸ್ವಿಯಾಗಿ ನೆರವೇರಿರುವುದನ್ನು ಇಲ್ಲಿ ಸ್ಮರಿಸಬಹುದು.

ಇನ್ನು ಮುಂದಾದರೂ ಈ ತರಹದ ರಾಜಕೀಯ ಬಣ್ಣ ಬಳಿದು ಸಾರ್ವಜನಿಕರನ್ನು ತಪ್ಪುದಾರಿಗೆ ಎಳೆಯದಿರಲೆಂದು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ ನಾವು ಮಾಡಿರುವ ಸಮಾರಂಭದಲ್ಲಿ ಯಾವ ರಾಜಕೀಯವೂ ಇರುವುದಿಲ್ಲವೆಂದು ಈ ಮೂಲಕ ಸ್ಪಷ್ಟೀಕರಿಸುತ್ತೇನೆ

ಎ ಬಿ. ವಾಸಪ್ಪ, ಅಧ್ಯಕ್ಷರು,
ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಕೊಪ್ಪ.

ದೂರ ಸಂಪರ್ಕ ಇಲಾಖೆ
ಟೆಲಿಕಾಂ ಡಿಸ್ಟ್ರಿಕ್ಟ್ ಇಂಜಿನಿಯರ್‌ರವರ ಕಛೇರಿ, ಚಿಕ್ಕಮಗಳೂರು.

ಟೆಂಡರ್ ಪ್ರಕಟಣೆ

ಚಿಕ್ಕಮಗಳೂರು ದೂರ ಸಂಪರ್ಕ ಜಿಲ್ಲೆಯ ಕೊಪ್ಪ ದೂರವಾಣಿ ಕೇಂದ್ರಕ್ಕೆ ಸ್ಥಳಾವಕಾಶವನ್ನು ಬಾಡಿಗೆ ಕರಾರಿನ ಮೇಲೆ ಕೊಡುವುದರ ಬಗ್ಗೆ ಮೊಹರಾದ ಟೆಂಡರ್‌ಗಳನ್ನು ಕರೆಯಲಾಗಿದೆ.

ಸ್ಥಳಾವಕಾಶ : ಒಳ ಆವರಣ ಸುಮಾರು 3 ಸಾವಿರ (ಮೂರು ಸಾವಿರ) ಚ. ಅಡಿ. ಹಾಗೂ ಖಾಲಿ ಜಾಗ ಸುಮಾರು ಒಂದು ಸಾವಿರ ಚ. ಅಡಿ ಇರಬೇಕು.

ಟೆಂಡರುದಾರರು ತಮ್ಮ ಟೆಂಡರಿನ ಜೊತೆಯಲ್ಲಿ ರೂ. 200 ಕ್ಕೆ ಇ. ಎಂ. ಡಿ ಹಣವನ್ನು "ಅಕೌಂಟ್ಸ್ ಆಫೀಸರ್, ಆಫೀಸ್ ಆಫ್ ದಿ ಟಿ.ಡಿ.ಇ ಚಿಕ್ಕಮಗಳೂರು" ಇವರಿಗೆ ಪಾವತಿಯಾಗುವಂತೆ ಯಾವುದೇ ಬ್ಯಾಂಕಿನ ಡಿಮ್ಯಾಂಡ್ ಡ್ರಾಫ್ಟನ್ನು ಲಗತ್ತಿಸುವುದು.

ಟೆಂಡರಿನ ಲಕೋಟೆಯ ಮೇಲೆ "ಕೊಪ್ಪ ದೂರವಾಣಿ ಕೇಂದ್ರಕ್ಕೆ ಕಟ್ಟಡದ ಟೆಂಡರು" ಎಂಬ ಮೇಲ್ಬರಹ ಇರಬೇಕು.

ಟೆಂಡರ್‌ಗಳನ್ನು ಸ್ವೀಕರಿಸಲು ಕಡೆಯ ದಿನಾಂಕ 20-4-91ರ ಮಧ್ಯಾಹ್ನ 1 ಗಂಟೆಯವರೆಗೆ ಆಗಿರುತ್ತದೆ ಟೆಂಡರ್ ಸಲ್ಲಿಸಲು ವಿಳಾಸ :

ಶ್ರೀ ಕೆ ಸಿ ರಾವ್, ಟೆಲಿಕಾಂ ಡಿಸ್ಟ್ರಿಕ್ಟ್ ಇಂಜಿನಿಯರ್, ಬಿ.ಎಂ ಟ್ರೇಡಿಂಗ್ ಕಾರ್ಪೊರೇಷನ್ ಬಿಲ್ಡಿಂಗ್, ನಾಯುಡು ರಸ್ತೆ, ಚಿಕ್ಕಮಗಳೂರು

ಹೆಚ್ಚಿನ ವಿವರಗಳು ಮತ್ತು ಇತರ ಟೆಂಡರ್ ನಿಬಂಧನೆಗಳಿಗೆ ಸ್ಥಳೀಯ ದೂರ ಸಂಪರ್ಕಾಧಿಕಾರಿಗಳನ್ನು ಸಂಪರ್ಕಿಸಬಹುದು ಫೋನ್ : 14 ಅಥವಾ 140.

(ಸಹಿ)
ಟೆಲಿಕಾಂ ಡಿಸ್ಟ್ರಿಕ್ಟ್ ಇಂಜಿನಿಯರ್,
ಚಿಕ್ಕಮಗಳೂರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ